# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮೂಡಬಿದ್ರೆ

ದಿನಾಂಕ 29 ನೇ ದಿವಸ ಜನವರಿ ತಿಂಗಳ 2020 ನೇ ಇಸ್ವಿಯಂದು

**ಅಪರಾಧ ಮೊಕದ್ದಮೆ ಸಂಖ್ಯೆ 390/2019**

ಇವರೀರ್ವರ ನಡುವೆಃ

ಶ್ರೀ ಜಯಪ್ರಕಾಶ್ ರಾವ್ ,
ಪ್ರಾಯಃ 49 ವರ್ಷ,
ಬಿನ್ಃ ಶ್ರೀ ರಾಮ ರಾವ್,
ವಾಸಃ ಸನಿಲ ಹೌಸ್, ಶಿಬ್ರಿಕೆರೆ ಅಂಚೆ,
ತೆಂಕ ಎಡಪದವು ಗ್ರಾಮ,
ಮಂಗಳೂರು ತಾಲೂಕು, ದ.ಕ. .... ಪಿರ್ಯಾದುದಾರರು

- ಮತ್ತು -

ಶ್ರೀ ಪ್ರದೀಪ್ ಶೆಟ್ಟಿ, ವಯಸ್ಕರು,
ತಂದೆಃ ರಾಜಗೋಪಾಲ್,
ವಾಸಃ ನಿಸರ್ಗ ಹೌಸ್, ಮೂಡುಮಾರ್ನಾಡ್ ಗ್ರಾಮ,
ಮಂಗಳೂರು ತಾಲೂಕು. ........ ಆರೋಪಿತ

## ಆಪಾದನೆ

ಆರೋಪಿಯಾದ ನೀವು ಫಿರ್ಯಾದಿದಾರರಿಂದ ಪಡೆದುಕೊಂಡಿರುವ ರೂ.56,000/- ಗಳ ಸಾಲದ ಮರುಪಾವತಿಗಾಗಿ ದಿನಾಂಕ 08-01-2019 ಕ್ಕೆ ಪಾವತಿಯಾಗುವಂತೆ ಚೆಕ್ಕಿನ ಸಂಖ್ಯೆ387397 ನ್ನು ರೂ.56,000-00 ಗಳಿಗೆ ಕೆನರಾ ಬ್ಯಾಂಕ್, ಬೆಳ್ವಾಯಿ ಶಾಖೆಯ ಬ್ಯಾಂಕಿನ ಚೆಕ್ಕನ್ನು ಕೊಟ್ಟಿದ್ದು, ಸದ್ರಿ ಚೆಕ್ಕಿನ ಬಾಬ್ತು ಹಣವನ್ನು ಪಡೆಯಲು ಫಿರ್ಯಾದುದಾರರು ತಮ್ಮ ಖಾತೆಯನ್ನು ಹೊಂದಿದ ಇಂಡಿಯನ್ ಬ್ಯಾಂಕ್, ಬಡಗ ಎಡಪದವು ಶಾಖೆಯಲ್ಲಿ ಚೆಕ್ಕನ್ನು ಹಾಜರುಪಡಿಸಿದಾಗ ನಿಮ್ಮ ಚೆಕ್ಕು ತಿರಸ್ಕೃತಗೊಂಡು "Funds insufficient" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡಿರುತ್ತದೆ. ಈ ಬಗ್ಗೆ ಫಿರ್ಯಾದುದಾರರು ದಿನಾಂಕ 02-05-2019 ರಂದು ನಿಮಗೆ ನೋಟೀಸು ಕಳುಹಿಸಿದ್ದು, ಸದ್ರಿ ನೋಟೀಸು ನಿಮಗೆ ತಲುಪಿದ್ದರೂ ಸಹ 15 ದಿನಗಳ ಒಳಗೆ ನೀವು ಅಮಾನ್ಯಗೊಂಡ ಚೆಕ್ಕಿನ ಬಾಬ್ತು ಹಣವನ್ನು ಫಿರ್ಯಾದಿಗೆ ಪಾವತಿ ಮಾಡಿರುವುದಿಲ್ಲ. ಆದ್ದರಿಂದ ನೀವು ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ ಕಲಂ 138 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ

ಸಂಜ್ಞಾನದೊಳಗೆ ಮಾಡಿರುತ್ತೀರಿ.

ಪ್ರಶ್ನೆ 1:- ಮೇಲೆ ಓದಿ ಹೇಳಲಾದ ಆಪಾದನೆ ಅರ್ಥವಾಯಿತೋ ಹೇಗೆ?
ಉತ್ತರಃ

ಪ್ರಶ್ನೆ 2:- ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ಯಾವುದಾದರೂ ಪ್ರತಿರಕ್ಷಣೆ ಬಯಸುವಿರೋ?
ಉತ್ತರಃ

ಈ ಮೇಲಿನ ಆಪಾದನೆಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಮೇಲಿನ ಆಪಾದನೆಯ ಸಾರವನ್ನು ಆರೋಪಿತನಿಗಿಂದು ಮುಕ್ತ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಲಾಗಿದ್ದು ಅದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡು ನೀಡಿದ ಯಥಾವತ್ ಹೇಳಿಕೆಯನ್ನು ದಾಖಲು ಮಾಡಲಾಯಿತು.)

(ಯಶವಂತ ಕುಮಾರ್ ಆರ್.)
ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,
ಮೂಡಬಿದ್ರೆ

<u>ಆರೋಪಿಯ ರುಜುಃ</u>